UNIVERSAL
LIBRARY
OU_200848
UNIVERSAL
LIBRARY

# ಅಮರಜ್ಯೋತಿ

– ಅಕ್ಕಮಹಾದೇವಿ –

ಲಾವಣಿಕಾರ

ವ್ಹಿ. ಕೆ. ಕರಡಿ

ಬಿ. ಎ., ಬಿ. ಟಿ.

೦–೬–೦

ಮುದ್ರಕರು :
ಎಸ್. ಎನ್. ಕುಲಕರ್ಣಿ
ಲಲಿತ ಮುದ್ರಣಾಲಯ
ಧಾರವಾಡ

ಮೊದಲನೆಯ ಅಚ್ಚು
೧೯೪೯

ಪ್ರಕಾಶಕರು :
ದ. ಬಾ. ಕುಲಕರ್ಣಿ
ಮನೋಹರ ಗ್ರಂಥ ಭಾಂಡಾರ
ಧಾರವಾಡ

# ಮೊದಲ ನುಡಿ

ಎಚ್ಚತ್ತ ಭಾರತವು ಕಳೆದ ತಲೆಮಾರಿನಲ್ಲಿ ಮಾಡಿದ ತ್ಯಾಗ–ಸಾಹಸಗಳ ಅಮೃತಫಲವಾಗಿ ಇಂದು ಸ್ವತಂತ್ರವಾಗಿದೆ. ದಾಸ್ಯದ ನೊಗವನ್ನು ಬಿಸುಟಿ ಮೊಗವನ್ನು ಇದೀಗ ಮೇಲೆತ್ತಿದೆ. ಸ್ವಾತಂತ್ರ್ಯ ಸಂಗ್ರಾಮದ ಕ್ರಾಂತಿಮಂಥನದಲ್ಲಿ ಹೊರಟ ಕಾಲಕೂಟವು ಭಾರತವನ್ನು ದಹಿಸಿ ಬೆಂಡಾಗಿಸಿದೆ. ಕಾಶ್ಮೀರದಿಂದ ಕನ್ಯಾಕುಮಾರಿಯ ವರೆಗೆ, ಕರಾಚಿಯಿಂದ ಕಲಕತ್ತೆಯ ವರೆಗೆ ಗತಿಸಿ ಹೋದ ಘಟನೆಗಳನ್ನು ಒಂದೊಂದಾಗಿ ನೆನೆದುಕೊಂಡರೆ ಸ್ವಾತಂತ್ರ್ಯಕ್ಕಾಗಿ ಭಾರತವು ನೀಡಿದ ಬಲಿದಾನವು ಅಸಾಮಾನ್ಯವಾಗಿದೆ. ಎಲ್ಲಕ್ಕೂ ಹೆಚ್ಚಿನದಾಗಿ ಕ್ರೌರ್ಯಕ್ಕೆ ಕಳಸವಿಟ್ಟಂತೆ ಮಿಂಚಿಹೋದ ನಮ್ಮ ರಾಷ್ಟ್ರಪಿತ ಬಾಪೂನ ಅಮಾನುಷ ಕೊಲೆಯು ರೋಮಾಂಚಕಾರಕವಾದ ಜಾಗತಿಕ ದುರ್ಘಟನೆಯಾಗಿದೆ. ಸತ್ಯ–ಅಹಿಂಸೆಗಳ ಕರುಣೆಯ ಕಂದನಾದ ಬಾಪೂಜಿಯ ಅಮರ ಜೀವನವೇ ನಮ್ಮನ್ನು ಮುನ್ನಡೆಸುವ ಕರುಣಾಳು ಬೆಳಕಾಗಿ ಬೆಳಗುತ್ತಿದೆ. ವಿಶ್ವದ— ವಾತಾವರಣವೇ ಹಿಂಸೆಯ ರುಜಿನಗಳಿಂದ ತುಂಬಿರುವಂತೆ ಜಾಗತಿಕ ಶಾಂತತೆಯು ಕನಸಿನ ಧನವಾಗಿದೆ. ನಿಯಂತ್ರಣವಿಲ್ಲದ ವಿಜ್ಞಾನದ ಪ್ರಗತಿಯಿಂದ ಮಾನವನ ತಲೆಯು ಕದಡುಕೀಳುತ್ತಿದೆ; ಆದರೆ, ಅವನ ಹೃದಯ ತಿಳಿಯುತ್ತಿಲ್ಲ. ಸ್ವಾರ್ಥ ಅಂತರಿಕ್ಷದಲ್ಲಿ ಹೆಡೆಯೆತ್ತಿದೆ. ಕಷ್ಟ ಕಾರ್ಪಣ್ಯಗಳು ಗುಡಿಗಟ್ಟಿ ನಿಂತಿವೆ. ಯುಕ್ತಿ ಶಕ್ತಿಗಳ ಮಂಗಮುಷ್ಟಿಯಲ್ಲಿ ಸಿಲುಕಿ ಜಗದ ಜೀವನವೇ ನರಳುತ್ತಿದೆ. ವಿಶ್ವದ ವಿಧ್ವಂಸಕ ಶಕ್ತಿಗಳು ಕೆರಳಿವೆ; ರಾಜಕೀಯ ವಿವಿಧ ತತ್ವಗಳು ಉರುಳುತ್ತಿವೆ. ಮಾನವೀಯತೆಯ ಭವಿತವ್ಯವು ಮುಸಕಾಗತೊಡಗಿದೆ.

ಇಂಥ ಸಂಧಿಕಾಲದಲ್ಲಿ, ಜಾಗತಿಕ ಪ್ರಬಲ ರಾಷ್ಟ್ರಗಳೂ ಕೂಡ ಗೌರೀಶಂಕರದ ಕಡೆಗೆ ಮೊಗವೆತ್ತಿ ಆಶಾದೃಷ್ಟಿಯಿಂದ ಮಾರ್ಗದರ್ಶನಕ್ಕಾಗಿ ಕಾದಿವೆ. ಇದೀಗ ಭಾರತದ ಸರದಿ. ಜಾಗತಿಕ ಶಾಂತಿಸ್ಥಾಪನೆಯ ಮಹಾಮಾರ್ಗದಲ್ಲಿ ಭಾರತವೇ ಮುಖಂಡತ್ವವನ್ನು ವಹಿಸಬೇಕಾಗಿದೆ. ಗಗನಚುಂಬಿ ಗೌರೀಶಂಕರವೇ ಶಾಂತಿಕಿರಣಗಳನ್ನು ಸೂಸುವ ದೀಪಸ್ತಂಭವಾಗಬೇಕಾಗಿದೆ. ಈ ಸುವರ್ಣ ಸಂಧಿಯ ಔಚಿತ್ಯವನ್ನರಿತು ಭಾರತವು ತನ್ನ ಅಂತಃಶಕ್ತಿಯನ್ನು ಬಲಪಡಿಸುವದವಶ್ಯವಾಗಿದೆ. ಆರ್ಥಿಕಅವನತಿಯಿಂದ ಹದಗೆಡುತ್ತಿರುವ ಭಾರತೀಯಜನಾಂಗ ಜೀವನದ ನೈತಿಕ ಮಟ್ಟನ್ನು ಎತ್ತಲು ಸಾಹಸಗಳು ನಾಡಿನುದ್ದಕ್ಕೂ ನಡೆದಿವೆ. ಹೊಸ ಹೊಸ ಶೈಕ್ಷಣಿಕ ವಿಧಾನಗಳು ಮೊದಲುಗೊಂಡಿವೆ. ರಾಷ್ಟ್ರೀಯ ಶಿಕ್ಷಣವು ರೂಪುಗೊಳ್ಳುವದರಲ್ಲಿದೆ. ಆದರಿಂದ, ಜಾತಿ-ಮತವನ್ನೂ ಕೀಳು-ಮೇಲನ್ನೂ ಆರ್ಥಿಕ ಅವ್ಯವಸ್ಥೆಯನ್ನೂ ಅಲ್ಲದೆ ಈ ತೆರನಾದ ಬೇರೆ ಎಷ್ಟೋ ಭೇದಭಾವಗಳನ್ನು ಗಣಿಸದ ಒಂದು ರಾಷ್ಟ್ರೀಯತ್ವವೂ, ಬಾಂಧವ್ಯವೂ ಜನಸ್ವಭಾವದಲ್ಲಿ ಸಮರಸವಾಗಿ ಕೂಡಿಕೊಳ್ಳುವದರಲ್ಲಿ ಸಂದೇಹವಿಲ್ಲ. ಈ ಆದರ್ಶಗಳಂತೆ ಬಾಳಿ, ನಮ್ಮ ಇಂದಿನ ಬಾಳಿಗೆ ಬೆಳಕಾಗಬಲ್ಲ ಮಹಾವ್ಯಕ್ತಿಗಳು ಕನ್ನಡ ತಾಯಿಯ ಉದರವನ್ನು ಸಾರ್ಥಕಗೊಳಿಸಿದ್ದಾರೆ. ಅಂಥವರ ಜೀವನಕಥೆಯು ನಮ್ಮ ನಾಡಿನ ಹೊಸ ಕೆಲಸಕ್ಕೆ ಸರಿಯಾದ ಸ್ಫೂರ್ತಿಯನ್ನು ಸಲ್ಲಿಸಲು ಸಮರ್ಥವಾಗಿದೆ. ಅಂಥ ವಿಭೂತಿಗಳ ಜೀವನಚರಿತ್ರೆಗಳನ್ನು ಜನಸಾಮಾನ್ಯರಿಗೂ ತಿಳಿಯುವ ರೀತಿಯಲ್ಲಿ ಹೇಳಬೇಕಾಗಿದೆ. ಅವರ ಜೀವನ ಸೌಂದರ್ಯದಲ್ಲಿ ಮೂರ್ತಿಗೊಂಡ, ಸತ್ವಶೀಲವಾದ ವ್ಯಕ್ತಿ ಪ್ರಭೆಯನ್ನು ಬೆಳಗುವಂತೆ ಸಾಹಿತ್ಯದ ವಿವಿಧ ರೂಪಗಳಲ್ಲಿ ಜೀವಂತವಾಗಿರುವಂತೆ

ಚಿತ್ರಿಸಬೇಕು. ಆ ಸಾಹಿತ್ಯವು ಸಾರ್ವಜನಿಕವಾಗಬೇಕು. ಅಂದರೆ ಮಾತ್ರ ಸಾಹಿತ್ಯದ ಒಳತಿರುಳಾದ ಸಂಸ್ಕೃತಿಯು ಜನಸಾಮಾನ್ಯರ ಸೊತ್ತಾಗುವದು.

ಈ ಆದರ್ಶವನ್ನು ಎದುರಿಗೆ ಇಟ್ಟುಕೊಂಡೇ 'ಅಕ್ಕ ಮಹಾದೇವಿಯ' ದಿವ್ಯ ಚರಿತ್ರೆಯ ಸತ್ಯ-ಸಂಗೀತವನ್ನು ಜನ ಸಾಮಾನ್ಯಕ್ಕೆ ತುಂಬುಗುವ ಮಟ್ಟಿನಲ್ಲಿ ಸುಲಭವಾದ ಲಾವಣಿಯ ನಡಿಗೆಯಲ್ಲಿ ರೂಪಿಸುವ ಒಂದು ಪ್ರಯತ್ನವನ್ನು ಗೆಳೆಯರಾದ ಶ್ರೀ ವ್ಹಿ. ಕೆ. ಕರಡಿಯವರು ಮಾಡಿರುವದು ಉಚಿತವೇ ಆಗಿದೆ. ಶ್ರೀ. ಕರಡಿಯವರು ಕಲಾಸಂಪನ್ನಜೀವಿಗಳು. ಅವರು ಉತ್ತಮ ಗಮಕಿಗಳೂ ಹೌದು; ಕವಿಗಳೂ ಹೌದು. ಸಂಗೀತ ಮತ್ತು ಕಾವ್ಯಗಳ ಈ ಬಗೆಯಾದ ಸಂಬಂಧ ಮಧುರವಾದ ಸಂಬಂಧ. ಜಾನಪದ ಗೀತಗಳನ್ನು ಅರಗಿಸಿಕೊಂಡು ಅವುಗಳ ವಿವಿಧ ಮಟ್ಟುಗಳಲ್ಲಿ ಕವನಗಳನ್ನು ಬರೆದು, ಅವುಗಳನ್ನು ಸರಾಗವಾಗಿ ಹಾಡಬಲ್ಲರು. ಅವರ 'ಅಕ್ಕನ ಲಾವಣಿ'ಯು ರಸವಾಣಿಯು ವಿದಗ್ಧರನ್ನೂ ಸಹ ಮುಗ್ಧಗೊಳಿಸದಿರಲಾರದೆಂದು ನನ್ನ ಅನುಭವ. ಜನಸಾಮಾನ್ಯರ ನೈತಿಕ ಶಿಕ್ಷಣಕ್ಕೆ ಇದೊಂದು ಅಮೋಘವಾದ ಸೇವೆ.

ಕನ್ನಡ ಸಾಹಿತ್ಯದ ೧೨ನೆಯ ಶತಮಾನದ ವಿರಾಟ ಗರ್ಭದಲ್ಲೊಗೆದ ಕನ್ನಡ ಜನಜೀವನದಲ್ಲಿ ಒಂದು ಅಭೂತಪೂರ್ವವಾದ ಕ್ರಾಂತಿಯನ್ನೆಸಗಿದ ಶಿವಶರಣರ ಸಂತಾನದಲ್ಲಿ ಅಕ್ಕನು ಶಿರೋರತ್ನ. ಜೀವನದ ನೂರಾರು ತಾಪಾನುತಾಪಗಳಿಂದ ಬೆಂದು ಬೇಗುದಿಗೊಂಡ ಇಂದಿನ ಜನಮನಕ್ಕೆ ಅಕ್ಕನ ಅಮೃತ ಜೀವನದ ಸವಿನೆನಹು ಶಾಂತಿದಾಯಕವಾಗುವದರಲ್ಲಿ ಸಂದೇಹವಿಲ್ಲ. ಬಸವಣ್ಣನ ಭಕ್ತಿ, ಚನ್ನಬಸವಣ್ಣನ ಜ್ಞಾನ, ಪ್ರಭುದೇವರ ವೈರಾಗ್ಯಗಳ ತ್ರಿವೇಣೀಸಂಗಮದಲ್ಲಿ ಚಿರ

ಸ್ನಾನಗೈದು, ಶಿವಭಾವ ಸಂಪನ್ನೆಯಾದ ಪುಣ್ಯದ ಪುಂಜೆಯಾದ ಸತ್ಯದ ಸದನವಾದ, ಶಾಂತಿಯ ನೆಲೆವೀಡಾದ ಅಕ್ಕನ ಪವಿತ್ರ ಜೀವನವು ನಮ್ಮಂಥ ಪಾಮರರಿಗೆ ಇಂದು ಕೊಂಚಕಾಲವಾದರೂ ಶಾಂತಿಯನ್ನೂ ಆನಂದವನ್ನೂ ಕಲ್ಪಿಸಿಕೊಡಬಹುದಾಗಿದೆ. ಅಕ್ಕನು "ಮುಟ್ಟಿದುದು, ಪರುಷ. ಮೆಟ್ಟಿದ ಧರೆ ಪಾವನ. ನುಡಿದುದೆಲ್ಲ ಶಿವತತ್ವ. ನಡೆದುದೆಲ್ಲ ಶಿವಮಾರ್ಗ, ನೆರೆದುದೆಲ್ಲ ದೇವ ಸಭೆಯಾಗಿ...." ಕನ್ನಡ ನಾಡನ್ನೆ ಕೃತಾರ್ಥವನ್ನಾಗಿಸಿದ ಕರುಳಿನ ಕಥೆ, "ಸತ್ತವರ ಕಥೆಯಾಗದೆ,....ಹೊತ್ತು ಹೋಗದೆ ಪುಂಡರಾಲಿಪ ಮತ್ತ ಮತಿಗಳ ಗೋಷ್ಠಿಯಾಗದೆ ಕನ್ನಡ ಸಂಸ್ಕೃತಿಯ ಕೀರ್ತಿ ಕೇತನವಾಗಿದೆ. ಕನ್ನಡಿಗರ ಮೋಹದ ಕಣಿಯಾದ, ರಾಷ್ಟ್ರಭೂಷಣ ವೈರಾಗ್ಯ ರಾಣಿಯಾದ. ಪುಣ್ಯವೇ ಹೆಣ್ಣಾದ ದೇವತೆಯಾದ ಅಕ್ಕನ ಜೀವನವು ಇಂದಿನ ನಮ್ಮ ಬಾಳಬಟ್ಟೆಗೆ ಹುಣ್ಣಿಮೆಯ ಬೆಳದಿಂಗಳಾಗಿದೆ. ಅಂತೆಯೇ ಅವಳ ಆಧ್ಯಾತ್ಮ ಜೀವನದ ಅಮರಜ್ಯೋತಿಯು ಅಶಾಂತಿಯ ಮಂಜನ್ನು ಕರಗಿಸಿ, ತನ್ನ ಜೀವನದ ತಿರುಳಾದ ಬೋಧೆಯ ಬೆಳಕನ್ನು ನೀಡಬಹುದಾಗಿದೆ. ಅದಕ್ಕಾಗಿಯೇ ಅಕ್ಕನ ಜೀವನ ಸ್ವಾರಸ್ಯವು ಜನಮನವನ್ನು ಮುಟ್ಟುವಂತೆ, ಜನಪದ ಗೀತೆಯಲ್ಲಿ ಜನಪ್ರಿಯವಾದ ಲಾವಣಿಯ ರೀತಿಯಲ್ಲಿ ಬರೆದ ಈ ಕಥನಪರ ಕವನವು ಆದರಣೀಯವಾಗಿದೆಯೆಂದು ಹೇಳಬಯಸುತ್ತೇನೆ. ಹೆಚ್ಚಾಗಿ ಅದು, ಲಾವಣಿಕಾರರ ಹೃದಯಕಲಶದಿಂದ ತುಳುಕಿಬಂದ ಭಕ್ತಿಯ ರಸವೇ ಸಜೀವವಾಗಿ ಹರಿದಂತೆ ಭಾಸವಾಗುತ್ತದೆ. ಅದನ್ನು ಕೇಳುತ್ತಿರುವಾಗ ಅಕ್ಕನ ಮೂರ್ತಿಪ್ರಭೆಯು ಮನದಲ್ಲಿ ಮೂಡಿ ನಿಲ್ಲುತ್ತದೆ. ಅದರ ನಾದ ಮಾಧುರ್ಯವೂ, ಅದರ ಅಂತರ್ಯದಲ್ಲಿ ತೇಲಿಬರುವ ಸತ್ಯದ, ಅನುಭಾವದ,ಅಮರ ಸಂಗೀತವೂ ಜನಮನವನ್ನು ಜಾಲಿಸಿ ಬೆಳಕನ್ನು ಕೊಡಬಲ್ಲದು. ಜನತಾ ಶಿಕ್ಷಣದ ಗುರಿಯನ್ನರಿತು ಭಾ

ತದ ವಿವಿಧ ಜೀವಜ್ಯೋತಿಗಳ ಜೀವನ ಕಥೆಗಳನ್ನು ಜಾನಪದಗಳ ರೂಪದಿಂದ ನೀಡುತ್ತಿರುವ ಶ್ರೀ. ಕರಡಿಯವರ ಯತ್ನವು ವಿಧಾಯಕ ರೀತಿಗೆ ಸೇರಿದುದಾಗಿದೆ. ಅವರ ಈ ಆಶೆ ಹಣ್ಣಿಸಲೆಂದು ಹಾರೈಸುತ್ತೇನೆ.

ಪ್ರಸ್ತುತ ಲಾವಣಿಯ ಬಗೆಗೆ ಒಂದು ಮಾತು. ಅಕ್ಕನ ನಮನದೊಂದಿಗೆ ಕಥೆ ಆರಂಭವಾಗುತ್ತದೆ. "ಶಿವಬಳ್ಳಿಗೊಂದು ಹೂ ಬಿಟ್ಟಿತೇನು ಸುಂದರ" ಎಂದು ಅಕ್ಕನ ಜನನ ಬಾಲ್ಯಗಳನ್ನು ಸ್ವಲ್ಪದರಲ್ಲಿ ಉಚಿತವಾಗಿ ವರ್ಣಿಸಿ, ಅಕ್ಕನು ನವಯೌವನದ ನಂದನದಲ್ಲಿ ಕಾಲಿಟ್ಟಾಗ "ಯೌವನವು ತುಂಬಿ ಬಂಗಾರಗೊಂಬಿ ಮಹಾದೇವಿ" ಎಂದು ಅವಳ ರೂಪ ರಾಶಿಯನ್ನು ಕವಿಯು ವರ್ಣಿಸುತ್ತಾನೆ. ಆನಂತರ ಕಾಮಾತುರನಾದ ಕೌಶಿಕನ ಹಂಬಲ, ಅಕ್ಕನ ಸ್ಥಾನತ್ಯಾಗ, ಕಲ್ಯಾಣ ಪ್ರವೇಶ, ಮೊದಲಾದ ಸ್ಥೂಲಾಂಶಗಳನ್ನು ತೀವ್ರಗತಿಯಿಂದ ತಿರುಗಿಸಿ ಕವಿಯು ಅಕ್ಕನ ಆಧ್ಯಾತ್ಮ ಪ್ರಭೆಯು ಬೆಳಗಿದ ಕ್ರಾಂತಿಯ ಕೇಂದ್ರವಾದ ಕಲ್ಯಾಣಕ್ಕೆ ಬಂದು ಕಲ್ಯಾಣ ಮಂಟಪದ ದೃಶ್ಯವನ್ನು ಓದುಗರ ಎದುರು ನಿಲ್ಲಿಸುತ್ತಾನೆ. ಅಲ್ಲಿ ಪ್ರಭುದೇವರು, ಬಸವಣ್ಣವರು, ಮೊದಲಾದ ಶರಣರೊಡನೆ ನಡೆದ ಅಕ್ಕನ ಮಧುರಾಲಾಪಗಳನ್ನೂ, ಮಾರ್ಮಿಕವಾದ ಆಧ್ಯಾತ್ಮ ಚರ್ಚೆಯನ್ನೂ ಬಹುತೂಕದಿಂದ ಸಹಜವಾಗಿ ತೇಲಿಸಿಕೊಂಡು ಅಕ್ಕನ ಸುಂದರವಾದ ಜೀವನಚಿತ್ರಕ್ಕೆ ಸುವರ್ಣದ ಕಟ್ಟನ್ನು ಹಾಕಿದ್ದಾನೆ. "ಮೈಯ ಹಂಗು ತೊರೆದಿರುವಿಯಲ್ಲವೇನೆ?" ಎಂಬ ಪ್ರಭುದೇವರ, ಪ್ರಶ್ನೆಗೆ ಉತ್ತರವಾಗಿ ಮಹಾದೇವಿಯು: "ಈ ದೇಹ ದೇವನಿಹ ಗುಡಿಯು ನೋಡು ಪ್ರಭುವೇ" ಎಂದು ಹೇಳುವಲ್ಲಿ ಅಕ್ಕನ ವೀರವಾಣಿಯು ಮೈದಾಳಿದಂತಿದೆ. "ಶಿವನನ್ನು ಬೆರೆಯುವರೆ ವೀರೆಯಾಗಬೇಕು."

ಎಂದು ಬಸವಣ್ಣನು ಎಚ್ಚರಿಸಿದಾಗ " ಅತಿಕಾಮಿ ಚನ್ನನಿಗೆ ದೇಹವರ್ಪಿಸಿಹೆನು " ಎಂದು ಹೇಳುವಾಗ ಅಕ್ಕನ ವಿನಯಾತಿಶಯ, ವಾಕ್ಚಾತುರ್ಯ ಮತ್ತು ಸತ್ಯದ ಕೆಚ್ಚು ಹೊರ ಸೂಸಿವೆ. ಕೊನೆಗೆ ಕವಿಯು ಅಕ್ಕನ ಜೀವನದ ವಿಮರ್ಶೆಯನ್ನು ಮಾಡುತ್ತ:

ಕವಯಿತ್ರಿ, ಹುಚ್ಚಿ ಪ್ರೇಯಸಿ
ಧರ್ಮವನೆ ಕಾವ್ಯದೊಳು ಮಣಿಸಿ
ಜೀವನದ ತಿರುಳ ವಚನದಲಿ ಎರಕ ಹೊಯ್ದಿ ||

ಎಂದು ಬಳ್ಳೀ ಹೃದಯಂಗಮವಾಗಿ ನಿರೂಪಿಸಿದ್ದಾನೆ ವ್ಯವಹಾರದ ಕಾದಲಿನಲ್ಲಿ ಸಿಕ್ಕುಬಿದ್ದ ಇಂದಿನ ಜನತೆಗೆ ಆಧ್ಯಾತ್ಮದ ನೆರವನ್ನು ನೀಡಲೆಂದು ಬೇಡಿಕೊಂಡಿದ್ದಾನೆ.

"ಅಕ್ಕ ಕತ್ತಲಾಗಿಹುದು
ಕರುನಾಡ ಮುತ್ತಿ ಮುಸುಕಿಹುದು
ಬೆಳಕನ್ನು ನೀಡಿ ಜೀವನದ ಗುರಿಯ ತೋರೌ ||
" ಅಕ್ಕಾ ಜಾಣರಾಗಿಹೆವು
ವ್ಯವಹಾರ ಚತುರರಾಗಿಹೆವು
ಆಧ್ಯಾತ್ಮ ಜೀವನದ ಹುಚ್ಚು ಹಚ್ಚೆತಾಯಿ ||

ಹೀಗೆ ಈ ಲಾವಣಿಯಲ್ಲಿ ಅಕ್ಕನ ಜೀವನದ ಚರಿತ್ರಾಂಶಗಳನ್ನು ಹದವರಿತು ಹೆಣೆದು, ಅಕ್ಕನ ಆಂತರಿಕ ಜೀವನಕ್ಕೆ ಸಂಬಂಧಿಸಿದ ಉನ್ನತ ವ್ಯಕ್ತಿತ್ವದ ಜೀವಾಳವನ್ನೇ ಹಾಡಿನ ರೂಪದಲ್ಲಿ ಹರಿಸಿದ್ದಾರೆ. ನಿತ್ಯದ ಕಟು ಅನುಭವಗಳಿಂದ ಬೆಂದ ಮನವು ಶಾಂತಿಯಾಚನೆಗೆಂದು ಸತ್ಯ ಸಾಕ್ಷಾತ್ಕಾರಿಗಳಾದ ಶರಣರಲ್ಲಿ ಮೊರೆಯಿಡುವುದು ಸಹಜವಾಗಿದೆ. ಶರಣ ಜೀವನವೇ ಶಾಂತಿಯ ಸದನವಲ್ಲವೆ? ಅಕ್ಕನ ಚರಿತ್ರೆಯಲ್ಲಿ ಕಂಡು ಬರುವ ಸಂದಿಗ್ಧವಾದ, ವಾದಗ್ರಸ್ತವಾದ ವಿಷಯಗಳಿಗೆ ವಿಶೇಷವಾದ ಎಡೆಗೊಡದೆ, ಅವಳ ವಚನಗಳ ಬೆಳಕಿನಲ್ಲಿಯೋ ಅವಳ ಅಮೃತ

ವಾಣಿಯಲ್ಲಿಯೇ ಅವಳ ಕಥೆಯನ್ನು ಹೇಳ ಹೊರಟಿದ್ದಾರೆ. ಇದು ಕಾರಣವೇ ಅವಳ ಆತ್ಮಶ್ರೀಗೆ ಇಲ್ಲಿ ಕಳೆಯೇರಿದೆ. ಅಂತೆಯೇ ಸ್ವಾನುಭವ ಮತ್ತು ಶಿವಾನುಭವ ಪೂರ್ಣವಾದ ಅಕ್ಕನ ಅಂತರ್ವಾಣಿಯೇ ಈ ಲಾವಣಿಯಲ್ಲಿ ಸಮರಸವಾಗಿ ಹರಿದು ಬಂದು, ಸಂದರ್ಭಕ್ಕೆ ಅನುಗುಣವಾಗಿ ವೈದೋರಿ ಮೂಲ ಚಿತ್ರಕ್ಕೆ ಮೆರುಗನ್ನು ಬೀರಿದೆಯೆಂದು ಹೇಳಬಹುದು. ಆದುದರಿಂದ ಈ ಹಾಡನ್ನು ಓದುವದಕ್ಕಿಂತಲೂ ಹಾಡಿಯಾಗಲಿ ಇಲ್ಲವೆ ಹಾಡಿದುದನ್ನು ಕೇಳಿಯಾಗಲಿ ಸವಿಯ ಬೇಕೆಂದು ನನ್ನ ಅಭಿಪ್ರಾಯವು. ಇಂಥ ಜಾನಪದ ಗೀತಗಳು ಹೆಚ್ಚಿಗೆ ಬರಬೇಕಾಗಿವೆ. ಹಳ್ಳಿಯ ಸಮಾಜಬಾಂಧವರನ್ನು ಹೇಯ ವಾದ ದುರ್ಮಾರ್ಗದಿಂದ ತಿರುಗಿಸಿ ನಯವಾದ ನ್ಯಾಯ ಮಾರ್ಗದಲ್ಲಿರಿಸಲು ಇಂಥ ಹಾಡುಗಳಿಂದ ಸುಲಭ ಸಾಧ್ಯ ವಾಗುವದೆಂದು ನನ್ನ ನಂಬುಗೆ. ಇತ್ತೀಚೆಗೆ ನಡೆಯುತ್ತಿರುವ ಸಾರ್ವತ್ರಿಕವಾದ ಪ್ರೌಢಶಿಕ್ಷಣದ ಪ್ರಚಾರದಲ್ಲಿ, ಅಲ್ಲದೆ ಇನ್ನಿತರ, ಜನತಾ ಶೀಲ-ಸಂವರ್ಧನೆಯ ವಿವಿಧ ಚಟುವಟಿಕೆಗಳಲ್ಲಿ, ಈ ತೆರನಾದ ಜನಪದ ಗೀತೆಗಳು ಬಹಳೇ ಪರಿಣಾಮಕಾರಕ ವಾಗಬಲ್ಲವೆಂದು ಇಲ್ಲಿ ಸೂಚಿಸದಿರಲಾರೆ. ಈ ದಿಶೆಯಲ್ಲಿ ಜನತಾ ಜನಾರ್ದನನ ಸೇವೆಗಾಗಿ ಅತ್ಯಂತ ಭಕ್ತಿಪೂರ್ವಕವಾಗಿ ಕಾರ್ಯಮಾಡ ಹೊರಟ ಶ್ರೀ. ಕರಡಿಯವರ ಈ ಜಾನಪದ ಗೀತೆಯನ್ನು ಸಹಾನುಭೂತಿಯಿಂದ ಸ್ವಾಗತಿಸಬೇಕೆಂದು ಸಹೃದಯರಾದ ಕನ್ನಡಿಗರಲ್ಲಿ ನನ್ನ ವಿಜ್ಞಾಪನೆಗಳು.

ಕನ್ನಡ ಟ್ರೇನಿಂಗ ಕಾಲೇಜ, ಬೆಳಗಾವಿ
೧೫-೨-೧೯೪೯

ಎಸ್. ಡಿ. ಇಂಚಲ
ಪ್ರಿನ್ಸಿಪಾಲರು
ಕನ್ನಡ ಟ್ರೇನಿಂಗ ಕಾಲೇಜ, ಬೆಳಗಾವಿ

# ಅರಿಕೆ

ಈ 'ಅಮರ ಜ್ಯೋತಿ— ಅಕ್ಕಮಹಾದೇವಿ' ಯ ಲಾವಣಿಯ ವಿಚಾರವಾಗಿ, ಲಾವಣಿಕಾರನಾದ ನಾನು ಹೇಳ ಬೇಕಾದುದೆಲ್ಲವನ್ನು ನನ್ನ ಗೆಳೆಯರಾದ ಪ್ರಿನ್ಸಿಪಾಲ ಎಸ್. ಡಿ. ಇಂಚಲರವರು ಈ ಲಾವಣಿಯ ಬಗ್ಗೆ ಬರೆದ ಮುನ್ನುಡಿಯಲ್ಲಿ ಹೇಳಿಬಿಟ್ಟಿದ್ದಾರೆ.

ನಾಲ್ಕು ವರ್ಷಗಳ ಹಿಂದೆ ಬರೆಯಲ್ಪಟ್ಟ 'ಶ್ರೀ ಬಸವೇಶ್ವರ' ಲಾವಣಿಯನ್ನು ಚಿಕ್ಕಮಕ್ಕಳ ಬಾಯಿಂದ (ಗೋಕಾಕದಲ್ಲಿ) ಕೇಳಿ, ಆನಂದಪಟ್ಟು ಇಂಥದೊಂದು ಕೃತಿಯು ಮಹಾದೇವಿಯಕ್ಕನ ಬಗ್ಗೆ ಆಗಬೇಕೆಂಬ ಹಾರೈಕೆಯಿಂದ ಕೊಡಿಸ ಸೂಚನೆಯು ಪ್ರೊಫೆಸರ ಎಸ್. ಎಸ್. ಭೂಸನೂರಮಠರವರಿಂದ ಬಂದದ್ದು ಈ ಚಿಕ್ಕ ಲಾವಣಿಯನ್ನು ಪೂರೈಸಲು ಪ್ರೇರೇಪಿಸಿತು.

ಇದರಲ್ಲಿ, ಇದ್ದ ಸಂಗತಿಯನ್ನೇ ಜನಸಾಮಾನ್ಯರಿಗೆ ತಿಳಿಯುವ ರೀತಿಯಲ್ಲಿ ಅಕ್ಕನ ಚರಿತ್ರೆಯ ರಹಸ್ಯವನ್ನೂ, ವಚನಗಳ ತಿರುಳನ್ನೂ, ವೀರಶೈವ ಉಚ್ಚ ಸಂಸ್ಕೃತಿಯ ಬೆಳಕನ್ನೂ ಬೀರಲಾಗಿದೆ. ಭಾವವನ್ನು ಪೂರೈಸಲು ಮಾತ್ರ ಛಂದಸ್ಸು ಆರಕಳಿಯಾಗಿರಬಹುದು. ಲಾವಣಿಯಾದುದರಿಂದ ಇದು ಸಹಜ.

ಇದನ್ನು ಓದಿದವರಿಗೆ, ಕೇಳಿದವರಿಗೆ, ಅಕ್ಕನ ಸಂಸ್ಕೃತಿಯ ಹೊಲಬು ತಿಳಿದು ಒಂದಿನಿತಾದರೂ ಅತ್ತಕಡೆಗೆ ಮನಃಪ್ರವೃತ್ತಿಯಾದುದಾದರೆ ಬರೆದುದು ಸಾರ್ಥಕ.

ಇಂದಿನ ಉಚ್ಚಶಿಕ್ಷಣ ಪಡೆದವರೂ, ಪದವೀಧರರೂ ಬೇರೆಬೇರೆ ಪ್ರಾಂತಗಳ ಸಾಹಿತಿಗಳಂತೆ ಇಂಥ ಲಾವಣಿಗಳನ್ನು

ಬರೆದು, ಹಾಡಿ, ಉಚ್ಚ ಜೀವನದ ಆದರ್ಶವನ್ನು ತೋರಿಸಿ ಜನಸಾಮಾನ್ಯರನ್ನು ಮೇಲ್ಮಟ್ಟಕ್ಕೆ ತರಲು ಪ್ರಯತ್ನಿಸಲೆಂದು ಪ್ರಾರ್ಥಿಸುವೆ.

ಈ ಲಾವಣಿಗೆ ಸುದೀರ್ಘ ಮುನ್ನುಡಿಯನ್ನು ಬರೆದು ಕಳಿ ತಂದುದಕ್ಕೆ ಉತ್ತರ ಕರ್ನಾಟಕದ ಆಧುನಿಕ ಕವಿಗಳೂ ಶ್ರೇಷ್ಠ ವಾಗ್ಮಿಗಳೂ ಕನ್ನಡಾಭಿಮಾನಿಗಳೂ ಶಿಕ್ಷಣವಿಶಾರದರೂ ಆದ ಪ್ರಿನ್ಸಿಪಾಲ ಎಸ್. ಡಿ. ಇಂಚಲ (ಇಸಿವಾದ ಚಲವುಳ್ಳವರು) ಅವರಿಗೆ ನನ್ನ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುವೆ.

ಹಿನ್ನುಡಿ—ಹಾರೈಕೆಗಳನ್ನು ಬರೆದು. ಕವನವನ್ನು ವಿಮರ್ಶಿಸಿ, ಓದುಗರಿಗೆ ಅಭಿರುಚಿಯನ್ನು ನೀಡಿದುದಕ್ಕಾಗಿ ಶ್ರೇಷ್ಠ ಸಾಹಿತಿಗಳೂ ಚಾಣಾಕ್ಷ ವಿಮರ್ಶಕರೂ ಕನ್ನಡಾಭಿಮಾನಿಗಳೂ ಆದರ್ಶ ಶಿಕ್ಷಕರೂ ಆದ ಗೆಳೆಯ ಮಂ. ಶಿ. ಕೇದನೂರರವರಿಗೆ ನನ್ನ ಧನ್ಯವಾದಗಳು.

ಅಲ್ಲದೆ, ಮುದ್ರಣ ಕಾರ್ಯವನ್ನು ಅಲ್ಪಾವಧಿಯಲ್ಲಿಯೇ ಅಂದವಾಗಿ ಅಚ್ಚುಕಟ್ಟಾಗಿ ಮಾಡಿಕೊಟ್ಟು ಅದರ ಪ್ರಕಟನೆಯ ಭಾರವನ್ನು ವಹಿಸಿಕೊಂಡ, ಲಲಿತ ಮುದ್ರಣಾಲಯದ ಒಡೆಯರಾದ ಕುಲಕರ್ಣಿ ಬಂಧುಗಳಿಗೆ ನನ್ನ ಒಲುಮೆಯ ವಂದನೆಗಳು.

ಬೆಳಗಾವಿ —ಲಾವಣಿಕಾರ

೧೫–೨–೧೯೪೯

# ಅರ್ಪಣ

ಹಾಡುಗಬ್ಬಗಳನ್ನು ತಮ್ಮ ಸೊತ್ತಾಗಿ ಮಾಡಿಕೊಂಡ
ಶಿವಲೋಕವಾಸಿ ಪರಮಪೂಜ್ಯ

**ತಾಯಿಯಂದಿರ ಪುಣ್ಯಸ್ಮರಣೆಗಾಗಿ**

ಅವರ ಪಾದಕಮಲಗಳಲ್ಲಿ ಈ ಕಿರಿಯ ಕೃತಿಪುಷ್ಪವನ್ನು
ಅರ್ಪಿಸುವೆ.

—ಮಗು ವೀರೇಶ

# ಅಮರಜ್ಯೋತಿ

ಏನೆಂಥ ದಿವ್ಯ ಜ್ಯೋತಿಯು
ಮನ ಬೆಳಗಿ ಬೆಳಗಿ ಹೊಳೆವುದು
ಎದೆಯನ್ನು ಉಕ್ಕಿಸುವ ಹಿರಿಯ ಅಕ್ಕ ನಮಿಸುವೆ ೧

ಶಸ್ತ್ರಾಸ್ತ್ರ ಹಿಡಿದು ಹೋರಾಡಿ
ಗಾಳಿಯಲಿ ಗುಂಡು ತೂರಾಡಿ
ಮಹಾಯುದ್ಧ ಗೆದ್ದ ಸುದ್ದಿಯ ಕೇಳಿದೇ ೨

ಬಹಿರಂಗ ಯುದ್ಧ ಎಷ್ಟರದು
ಬಿರಿಸೈನ್ಯ ಸಿರಿಯು ಗೆದೆಯುವುದು
ಅಂತರಂಗದಾತ್ಮ ಯುದ್ಧದಿ ಗೆದೆಯಬೇಕು ೩

ಜಗದೊಳಗೆ ವಿರಳ ಇಂಥವರು
ಭಾರತಕೆ ಭಾಗ್ಯ ತಂದವರು
ಹಿರಿಹಿರಿಯರಿಗೆ ಮಹಾದೇವಿಯಕ್ಕ ಮಾದರಿ ೪

ಉಡುತಡಿ ಗ್ರಾಮ ಮನೋಹರಾ
ನಿರ್ಮಲಸುಮತಿ ಭಕ್ತರ
ಶಿವಬಳ್ಳಿಗೊಂದು ಹೂ ಬಿಟ್ಟಿತೇನು ಸುಂದರಾ ೫

ಸುಳಿಗಾಳಿಗೆ ಬಳಕುವ ಹೂವು
ಬಂಗಾರ ಬಣ್ಣದ ಹೂವು
ಬನಬನದ ಪುಷ್ಪಗಳ ಮೀರಿ ನಿಂತಿತಾ ಹೂವು ೬

ದಿನದಿನವು ಉರುಳಿ ಹೋದವು
ಸೌಂದರ್ಯ ಸೊಬಗು ಮೆರೆದವು
ಯೌವನವು ತುಂಬಿ ಬಂಗಾರ ಗೊಂಬಿ ಮಹಾದೇವಿ ೭

ತಾಯ್ತಂದೆ ನೋಡಿ ನಲಿದಾಡಿ
ಹಿಗ್ಗಿದ ಹೊಳೆಯ ಹರಿಸ್ಯಾಡಿ
ಒಪ್ಪುಳ್ಳ ವರನನೆಲ್ಲಿಂದ ತಂದುಕೊಡಬೇಕು ೮

ಬೇಟೆಗೆ ಹೋದ ಕೌಶಿಕ
ಮಾಟಾಗಿ ದಾಟ ಬರುವುತ
ನಾಟಿಸಿದ ದಿಟ್ಟೆಯನು ಕೀಳಲೊಲ್ಲನಾತಾ ೯

ಮರಮರಳಿ ನೋಡೆ ನೋಡುತ
ಅರಮನೆಯ ದಾರಿ ಹಿಡಿಯುತ
ನಂದನದ ಪುಷ್ಪವಿದು ಆಹಾ ಎಂದನಾತಾ ೧೦

ಅರಸನ ಮೋಹ ಮಿಕ್ಕಿತು
ಏಸಿರಿಯ ಮುದವು ಉಕ್ಕಿತು
ಶರಣರ ತೇಜ–ಬಲಭವಿಗೆ ಏನು ಗೊತ್ತು ೧೧

ಅವಸರದಿ ಹೊಕ್ಕನರಮನೆ
ಸಚಿವರನ ಕರೆದು ಹೇಳ್ತಾನೆ
ಮಹಾದೇವಿ ರಾಣಿಯಾಗಲೇಬೇಕು ಈ ಕ್ಷಣ ೧೨

ಸೌಮ್ಯದಿ ಕೇಳಿ ನೋಡಿರಿ
ರಾಣಿಯ ಸೌಖ್ಯ ತಿಳಿಸಿರಿ
ತಾಯ್ತಂದೆ ಮನವನೊಲಿಸುತ್ತ ಮಗಳ ತನ್ನಿರಿ ೧೩

ಹಾಯಾಗಿ ಬೆಳೆದ ಬಾಲೆಗೆ
ಹರಪ್ರೇಮಿ ಮಹಾದೇವಿಗೆ
ಭವಿನಿಲಯ ವಾಸವಯ್ಯಯ್ಯೋ ಸಲ್ಲುವುದೇ ೧೪

ತಾಯ್ತಂದೆ ಮರಣ ಈಚೆಗೆ
ಭವಿಗೊಂಡನಾಗ್ವದಾಚೆಗೆ
ಕೆರೆಯುತ್ತ ಭಾವಿಯಿತ್ತಾಯ್ತೊ ಮಹಾದೇವಿಗೆ ೧೫

ಇಂತಹವೆ ಕುತ್ತು ಶರಣರಿಗೆ
ಅಂತೆಯೆ ಕೀರ್ತಿಯವರಿಗೆ
ಬಂತೀಗ ಅಂಥ ವೇಳೆಯು ಮಹಾದೇವಿಗೆ ೧೬

ಸಂಸಾರ ಕೆಸರ ತುಳಿಬೇಕು
ಮಾಯದ ಮುಸುಕ ಹೊರಬೇಕು
ಹೊರಮಿಂಚು ಥಳಕು ನೋಡುತ್ತ ನಲಿಯಬೇಕು ೧೭

ಮಹಾದೇವಿ ಮನವು ಎಂಥದು
ಮಾಯೆಯ ಗೆದ್ದು ನಿಲ್ಲುವುದು
ತಾನಾಗಿ ಹೊರಟು ತಾಯ್ತಂದೆ ರಕ್ಷಿಸಿದಳು ೧೮

ಸಾವಿಲ್ಲದವರನ ಬೇಡುತ
ಭವವಿಲ್ಲದವರನ ಹುಡುಕುತ
ಭವನಿಲಯ ಹೊಸ್ತಿಲಲಿ ಕಾಲು ಇಟ್ಟೇಬಿಟ್ಳಾ ೧೯

ಇಟ್ಟಂತೆ ಹೊರಗೆ ತೆಗೆದಳು
ಪ್ರತಿವ್ರತೆಯು ಧರ್ಮ ಕಾಯ್ದುಕೊಂ
ಕೌಶಿಕನ ಬಿಟ್ಟ ಕಥೆಯನ್ನು ಕೇಳಿ ಮಹಾತ್ಮರಾ ೨೦

ಅರಸನಿಗೆ ಒಗ್ಗ ಅರಮನೆ
ಶರಣರಿಗೆ ಕ್ಷಮವೆ ಸೆರೆಮನೆ
ಹಿರಿಮನವೆ ಶರಣರಿಗೆ ದೊಡ್ಡದೊಂದು ಅರಮನೆ ೨೧

ಮಾತಿಗೆ ಮಾತು ನಡೆದವು
ದೇವಿಯ, ಮಾತು ಮಾಣಿಕವು
ಕಾಮಾಂಧ ಕೌಶಿಕಗೆ ತಿರುಳು ಮಾತು ಹೊಳೆಯವು ೨೨

ಲೌಕಿಕದ ಮಾಯದಲಿ ಸಿಲುಕಿ
ಮೋಹದ ಜಾಲದಲಿ ತೊಡಕಿ
ಒದ್ದಾಡುತಾನೆ ಹುಲಿಯಂಥ ಅರಸು ಇಲಿಯಾಗಿ ೨೩

ಬಲವಂತ ಸೈನ್ಯದರಸನು
ಮಿಳಿ ಮಿಳಿ ಕಣ್ಣು ಬಿಡುವನು
ಮಾಯಾಕಾರ್ತಿ ಮುಂದೆ ಮಾಟದ ಗೊಂಬೆಯಾದನು ೨೪

ಕೈಚಾಚಿ ಗಾಳಿ ಹಿಡಿತಾನ
ಬಾಯ್ದೆರೆದು ಹಲ್ಲು ತಿಂತಾನ
ಎಲ್ಲೆಲ್ಲು ಇಲ್ಲ ದಾರಿಯು ಕೌಶಿಕನಿಗೆ ೨೫

ಅರಮನೆಯೆ ಸೆರಮನೆಯುದಾಯ್ತು
ಅರಸನ ಆಟ ನಿಂತಿತು
ತನ್ನದೆ ಐಸಿರಿಯು ತನಗೆ ವೈರಿಯಾಯ್ತು ೨೬

ಬೀಸ್ಯಾಳು ಇಂದ್ರಜಾಲವನು
ತೋರ್ಯಾಳು ಹಿರಿಯ ಮಹಿಮೆಯನು
ಸನಿಹಕ್ಕೆ ಬರಲು ಕೌಶಿಕನು ಬೆದರಿ ನಿಂತಾನು ೨೭

ಅರಮನೆಯ ರಸಿಕ ಸ್ತ್ರೀಯರಿಗೆ
ಸಚಿವರಿಗೆ ದಾಸರೆಲ್ಲರಿಗೆ
ಅರಗಿಳಿಯು ಮನವನೊಲಿಸಿರಿ ಎಂದು ಉಸುರಿದ ೨೮

ಬಂಜೆಗೆ ಬೇನೆ ಎಲ್ಲಿಯದು
ಮಲತಾಯಿ ಬಲ್ಲಳೇ ಮುದ್ದು
ನಮಗಾದ ನೋವು ಗೊತ್ತೇನು ತಾಯಿಗೇರಾ ೨೯

ಮೊರಡಿಯಲಿ ಆಡುವುದೆ ನವಿಲು
ಕಿರಿಹಳ್ಳ ಬೇಡುವುದೆ ಹಂಸೆ
ಮಾಮರವು ಚಿಗಿಯದಲೆ ಕೋಗಿಲೆಯು ಹಾಡೀತೇ ೩೦

ಎನ್ನರಸ ಮಲ್ಲಿಕಾರ್ಜುನ
ಅವನೇ ಮನದ ನಂದನ
ಈ ಸಾವಗಂಡರನು ಒಲ್ಲದೆನ್ನ ಮನ ೩೧

ಹೆಸರಿನಲಿ ಹೆಣ್ಣು ರೂಪವು
ಭಾವದಲಿ ಗಂಡು ರೂಪವು
ಶಿವಹರನೆ ಕಾಯೊ ಮೊರೆಹೊಗುವೆ ವಿಶ್ವರೂಪಾ ೩೨

ಮೋಹದ ಹುಚ್ಚು ತಲೆಗೇರಿ
ಧಾವಿಸಿ ದೇವಿಮೇಲೇರಿ
ಕೌಶಿಕನು ಸೆರಗು ಕೈಯಲ್ಲಿ ಹಿಡಿಯುತಾನ್ರಿ ೩೩

ನೋಡಿರ ಕೊಸರಿ ನಡೆದಳು
ಸಂಸಾರ ಒದ್ದು ಒಗೆದಾಳು
ಪರಮಾತ್ಮಧ್ಯಾನದಲಿ ಲೀನಳಾಗಿ ಹೊರಟಳು ೩೪

ಪಂಜರದ ಗಿಳಿಯು ಹಾರುವುದು
ಕೋಗಿಲೆಯು ಕೂಗಿ ನಲಿಯುವುದು
ರೆಕ್ಕೆಯ ಬಿಚ್ಚಿ ಹಾರುತ್ತ ಹಾಡುತಿಹುದೋ ೩೫

ಎಲ್ಲಿಹನು ಎನ್ನ ದೇವನು ?
ಎಲ್ಲೆಡೆಯಲಿರುವನಲ್ಲೇನು ?
ಈ ಹಕ್ಕಿ ಪಕ್ಕಿಗಳು ಬಲ್ಲನಲ್ಲವೇನು ? ೩೬

ಚಿಲಿಮಿಲಿ ಓದ್ವ ಗಿಳಿಗಳಿರಾ
ಸರವೆತ್ತಿ ಪಾಡ್ವ ಪಿಕಗಳಿರಾ
ಎನ್ನರಸ ಎಲ್ಲಿ ಇಹನೆಂದು ಹೇಳಿಬಿಡಿರೇ ೩೭

ಗುಂಯಿಗುಡುವ ತುಂಬಿಮರಿಗಳಿರಾ
ಗಿರಿಯಲ್ಲಿ ಕುಣಿವ ನವಿಲ್ಗಳಿರಾ
ಹೇಳಿರಿ ಮಲ್ಲಿಕಾರ್ಜುನನು ಎಲ್ಲಿ ಇರುವನೋ ೩೮

ಹಸಿವೆಗೆ ಹಣ್ಣು ಕೊಟ್ಟಿಹನು
ಬಾವಿಯಲಿ ನೀರು ತುಂಬಿಹನು
ಎನ್ನರಸ ಎನ್ನ ಸಂಗಡ ಬರುತಲಿಹನು ೩೯

ಯಾರ್‍ಯಾರು ಇಲ್ಲವೆನಬೇಡ
ದಾರಿಯಲಿ ಹೇಗೆ ಎನಬೇಡ
ವನವನದ ಗಿಡಗಳಲ್ಲಾತ ಇರುವ ನೋಡಾ ೪೦

ತರಗೆಲೆಯ ತಿಂದು ಜೀವಿಸುವೆ
ಸುರಿಗೆಯ ಮೇಲೆ ಒರಗುವೆ
ಒಡಲನ್ನು ಪ್ರಾಣವನು ನಿಮಗೆ ಒಪ್ಪಿಸುವೆ ೪೧

ಆಕಾಶ ಹರಿದು ಬಿದ್ದುವೆ
ಸುಜ್ಞನವಾಯಿತೆನ್ನುವೆ
ಗಿರಿ ಮೇಲೆ ಬಿದ್ದರೆ ಪುಷ್ಪವೆನ್ನುವೆನು ೪೨

ದೇಹದ ಹಂಗು ಎನಗೇನು
ಶಿರಹರಿದು ಬಿದ್ದರೆನಗೇನು
ಪ್ರಾಣವೆ ನಿಮಗೆ ಅರ್ಪಿತವು ಅನ್ನುವೆನು ೪೩

ವಿಧಿಯಿಂದ ಪೂಜೆಮಾಡುವೆನೆ
ಬಹಿರಂಗ ಸೇರದವ ನೀನೆ
ಅಂತರಂಗ ಧ್ಯಾನದಿಂದಯ್ಯೊ ದೂರನಿರುವಿ ೪೪

ಜಪಸ್ತೋತ್ರದಿಂದ ಒಲಿಸುವೆನೆ
ನಾದವ ಸೇರದವ ನೀನೆ
ನಿಜಜ್ಞಾನದಿಂದ ಒಲಿಸುವೆನೆ ನಿಲುಕದಿರುವಿ ೪೫

ಎದೆ ಬಟ್ಟಲಲ್ಲಿ ಇಡುವೆನೆ
ಸರ್ವಾಂಗ ಪೂರ್ಣ ಚನ್ನಿಗನೆ
ಸರ್ವೇಶ ಕಾಯೊ ನೀನೆನಗೆ ಮುಖವ ತೋರಿ ೪೬

ಹೇ ದೇವ ಒಲಿಸಲಾರೆನು
ನಾ ನಿನ್ನ ಮೊರೆಯ ಹೊಕ್ಕೆನು
ನೀನೆನಗೆ ಒಲಿಯುವುದೆ ಸುಖವು ಕಾಂಬುದಯ್ಯಾ ೨೭

ಉದಯದಲಿ ಎದ್ದು ನೆನೆವೆನು
ನೀ ಬರುವ ದಾರಿ ಕಾಯುವೆನು
ಚೆನ್ನಮಲ್ಲಿಕಾರ್ಜುನಾ ಎಂದು ಕಾಂಬೆ ನಿನ್ನ ೨೮

ಹಂಬಲವ ಕೇಳದಿರೆ ಮಾಣು
ನಾನಿನ್ನ ಹಾಡೆ ಹಾಡುವೆನು
ನಿನ್ನನ್ನು ಹಾಡದಿರೆ ಎಂತು ಸೈರಿಸುವೆನು ೨೯

ನೀನೆನ್ನ ನೋಡದಿರೆ ಮಾಣು
ನೀನೆನ್ನ–ನಪ್ಪದಿರೆ ಮಾಣು
ನಾನಿನ್ನ ನೋಡಿ ಹಿರಿಹಿರಿ ಹಿಗ್ಗುವೆನು ೩೦

ಹೊಳೆಯುವ ಕೆಂಪು ಜಡೆಗಳು
ಕಳೆಯುಳ್ಳ ದಿವ್ಯ ಕಣ್ಣುಗಳು
ಒಪ್ಪುಳ್ಳ ವರನ ಕಂಡೆನ್ನ ಬರವು ಹಿಂಗಿತು ೩೧

ಇಂದೆನ್ನ ಗಂಡ ಬಂದಿಹನು
ಸಿಂಗರಿಸಿ ಸಿದ್ಧಳಾಗುವೆನು
ನೀವೆಲ್ಲ ಸಡಗರದಿ ಬನ್ನಿ ಇದಿರು ಹೋಗೋಣು ೩೨

ದೇವನ ನೆನೆದು ನೆನೆಯುತ
ಹುಡುಕುತ್ತ ಅಡವಿ ತಿರುಗುತ
ಕಲ್ಯಾಣ ಪಟ್ಟಣಕೆ ಬಂದು ನಿಂತಳಲ್ಲಾ ೩೩

ಎನ್ನಂತೆ ಪುಣ್ಯ ಯಾರಿಗೆ
ಶಿವಭಕ್ತ ಬಂಧುಗಳು ಎನಗೆ
ಚನ್ನಮಲ್ಲಿಕಾರ್ಜುನಂತಪ್ಪ ಗಂಡನೆನಗೆ ೫೫

ನಮಿಸುವೆ ಪುಣ್ಯ ಪಟ್ಟಣವೆ
ಕಲ್ಯಾಣಕೇಂದ್ರ ವರಪುರವೆ
ಒಳ-ಹೊರಗೆ ಶುದ್ಧವಿದ್ದವಗೆ ಪುಣ್ಯಕ್ಷೇತ್ರ ೫೬

ಶರಣರು ಇದ್ದ ಪಟ್ಟಣ
ರಸಿಕರದೇನು ಕಲ್ಯಾಣ
ಕೈಲಾಸವಯ್ಯ ಬಸವಣ್ಣನಿದ್ದ ಕಲ್ಯಾಣ ೫೭

ಹುಡುಹುಡಿಕಿ ನೊಂದರೇನಿಲ್ಲ
ಹಂಬಲಿಸಿ ಹೊಕ್ಕರೇನಿಲ್ಲ
ತಾ ಬರುವ ಕಾಲಕಲ್ಲದೆ ಬರುವದಿಲ್ಲಾ ೫೮

ತಪವನ್ನು ಮಾಡಿದರೆ ಇಲ್ಲಾ
ಮಂತ್ರವ ಪಠಿಸಿದರೆ ಇಲ್ಲಾ
ಶಿವನೊಲಿಯುದಿದ್ದರೆ ಯಾರಿಗ್ಯಾರು ಇಲ್ಲಾ ೫೯

ಸಜ್ಜನರ ಕಂಡು ಹಿಗ್ಗಿದೆ
ಮಾಯೆಯ ಪಟಲ ಹರಿದಿದೆ
ಬಸವನ ಕಂಡು ಕಂಗಳ ಪರೆಯು ಹರಿದಿದೆ ೫೯

ಬಸವನು ನೋಡಿ ಬೆರಗಾಗಿ
ದೇವಿಯು ಮುಖಕೆ ಇದಿರಾಗಿ
ಪ್ರಭುದೇವ ನೋಡಿರೆಂದ್ಹೇಳಿ ಮಾತು ಹೇಳ್ತಾನೆ ೬೦

ರೂಹಿಲ್ಲದಂಗೆ ಒಲಿದಾಕೆ
ತನುವಿನ ಹಂಗು ತೊರೆದಾಕೆ
ಸತ್ಯವು ಬತ್ತಲಿರುವದು ತಾನೆ ಚಂದ! ೬೧

ಭಾವಕೆ ಭಾವ ಬೆರೆವುದಕೆ
ಕಾಯದ ಮುಸುಕು ಏತಕೆ
ಭಾವದ ಕೂಟ ಬತ್ತಲೆ ಕಾಣಿರಣ್ಣಾ ೬೨

ತುಂಬಿದ ತರುಣಿ ಗೊಂಬೆಯೋ
ಪತಿರಾಯನಾರು ಹೇಳ್ತಾಯೆ
ಕುರುಹನ್ನು ಹೇಳಿ ಕೇಳ್ಳಿರು ಎನ್ನತಾಯೆ ೬೩

ಹರನನ್ನೆ ಬೇಡಿ ಬಯಸಿದೆ
ಸಾವಿಲ್ಲದ ಪತಿಯ ನೆನೆಸಿದೆ
ಕೇಳಿರಿ! ದೈವ ಮದುವೆಯ ವೈಭವವ ೬೪

ಹವಳದ ಹಂದರವ ಹಾಕಿ
ಬಂಗಾರ ತೋರಣವನಿಕ್ಕಿ
ತುಂಬೆಲ್ಲ ರಂಗವೈಖರಿ ವಜ್ರ ಶೃಂಗಾರ ೬೫

ಶರಣರು ನಿಬ್ಬಣಿಗರಲ್ಲಿ
ಹರಹರ ಘೋಷಣವು ಇಲ್ಲಿ
ಕೈ ಕೈಯ ಹಿಡಿಸಿ ಧಾರೆಯ ಎರೆದರಲ್ಲಿ ೬೬

ಶಿವಹರನೆ ಗಂಡ ಪ್ರಭುದೇವ
ಸಾವಿಲ್ಲದ ಗಂಡ ಗುರುದೇವ
ಈ ಸಾವ, ಕೆಡುವ ಗಂಡರು ಎಷ್ಟರವರ ೬೭

ಕೌಶಿಕನು ಗಂಡನಲ್ಲೇನೆ
ಮದುವೆಗೆ ಒಪ್ಪಿರುವೆ ನೀನೆ
ಶಿವಭಕ್ತನಾಗಲೊಪ್ಪಿದರೆ ಒಪ್ಪಲಿಲ್ಲೇನೆ ೬೮

ಮಿಂಚಿದ ಮಾತು ಮರೆಯಾಯ್ತು
ಮರುಕವು ಚಿಂತೆ ಮನಕಾಯ್ತು
ಹಳೆಜನ್ಮ ಬಿಟ್ಟು ಹೊಸಜನ್ಮ ಹುಡುಕಿ ನಿಂತೆ ೬೯

ಸಿಟ್ಟೇನು ಶರಣರಿಗೆ ಸರಿಯೇ
ಬಟ್ಟೆಯನು ಬಿಸುಟೆ ಹೊರಟೆಯೇ
ಚಣಹೊತ್ತು ಸಿಡುಕೆ ವೈರಾಗ್ಯ ಬಂದಿತೇನೆ ೭೦

ತನುವಿನ ಆಶೆ ಬಿಟ್ಹೋಯ್ತೆ
ಮನಸಿನ ಭ್ರಾಂತಿ ಅಳಿಯಿತೆ
ಕೂದಲಿನ ಮುಸುಕು ಮತ್ತೇಕೆ ನೀನೆ ಹೇಳೆ ೭೧

ನಂಬಯ್ಯ ನಂಬೊ ಪ್ರಭುದೇವ
ಎನ್ನನಿಯ ಚನ್ನ ನಿಜದೇವ
ತನುಗುಣವ ಮರೆತು ಅವನಲ್ಲಿ ಬೆರೆತೆ ಮಹಾದೇವಾ ೭೨

ಕರಿಕರಿ ಕಾದಿದರೆ ಏನು
ಮಿರಿಮಿರಿ ಮಿಂಚಿದರೆ ಏನು
ಅಂತರಂಗ ಶುದ್ಧಿಯೊಳು ಎಂಥ ತನುವು ಏನು ೭೩

ದೇವನು ನಿನಗೆ ಒಲಿದನೆ
ಭಾವವು ಶುದ್ಧವಿಹುದೇನೆ
ಲಜ್ಜೆಯ ತೋರಿ ಕೂದಲವ ಮುಚ್ಚಿ ಇರುವೆ ೭೪

ಫಲವೆಲ್ಲ ಪಕ್ವವಾಗಿಹುದು
ಸಿಪ್ಪೆಯು ಒಪ್ಪುಗೆಟ್ಟಿಹುದು
ನಿಮಗೇನೆ ನೋವು ಬೇಡೆಂದು ಮುಚ್ಚಿ ಇರುವೆ ೨೫

ಮೈಯನ್ನು ತಾಳಿಬಂದಿರುವೆ
ಮೈಯಿಂದ ಬಾಳಿ ಬರುತಿರುವೆ
ನೀ ಮೈಯ ಹಂಗುತೊರೆದಿರುವಿಯಲ್ಲವೇನೆ ? ೨೬

ಮೈಯನ್ನು ತೊರೆವುದಿಲ್ಲಯ್ಯಾ
ಮೈಹೊಲೆಯ ಬಿಟ್ಟಿರುವೆನಯ್ಯಾ
ಈ ದೇಹ ದೇವನಿಹ ಗುಡಿಯು ನೋಡು ಪ್ರಭುವೆ ೨೭

ಹಾವಿನ ಹಲ್ಲು ಮುರಿದೊಗೆದು
ಆಡಿಸುವ ಬಲವ ಗಳಿಸುವುದು
ಹಾವಿನ ಕೂಡ ಹಾಡುತ್ತ ಕುಣಿಯಬಹುದು ೨೮

ಏನೆಂಥ ಜ್ಞಾನ ಜ್ಯೋತಿಯು
ಒಳ-ಹೊರಗು ದಿವ್ಯಕಾಂತಿಯು
ನೋಡುತ್ತ ಧನ್ಯವಾದವು ಕಂಗಳೆನ್ನ ೨೯

ನೀವೆಲ್ಲ ದಯವ ತೋರಿದಿರಿ
ಅಂಗದಲಿ ಲಿಂಗ ಬೆರೆಸಿದಿರಿ
ಶರಣರ ನೋಡಿ ಧನ್ಯವು ಕಂಗಳೆನ್ನ ೩೦

ಅಗ್ನಿಯನು ಕಾಮನೊಡ್ಡುವನು
ಬಳಲಿಸಿ ಅಳಿಸಿ ನೋಡುವನು
ಶಿವನನ್ನು ಬೆರೆಸುವರೆ ವೀರೆಯಾಗಬೇಕು ೩೧

ಬಸವಣ್ಣಾ ನಿಮ್ಮ ದಯದಿಂದ
ಕಾಮನ ಗೆದ್ದ ಗೆಲವಿಂದ
ಅತಿಕಾಮಿ ಚನ್ನನಿಗೆ ದೇಹವರ್ಪಿಸಿಹೆನು ೮೨

ಅಂತರಂಗ ಬೆಳಕು ಬಹಿರಂಗ
ತಾನೇ ತಾನೇ ಲಿಂಗಾಂಗ
ದೇವಿಯ ದಿವ್ಯ ಜ್ಯೋತಿಗೆ ನಮೋನಮೋ ೮೩

ಪರ್ವಾದವೆಂದು ಹಿರಿಯರೇ
ನಡುಮುರಿಯಿತೆಂದು ಹಿರಿಯರೇ
ಹುತ್ತೇರಿ ಚಿತ್ತ ಬೆಳಿಪವರು ಎಲ್ಲ ಹಿರಿಯರೇ ೮೪

ತಾನ್ಯಾರು ಎಂದು ತಾ ತಿಳಿದು
ಮೇಲ್ಕೀಳು ಭಾವ ಮುರಿದೊಗೆದು
ಆ ಹಿರಿಯ ದೇವನಲಿ ಬೆರೆತ ದೇವಿ ಮಹಾದೇವಿ ೮೫

ಎನ್ನ ಭಕ್ತಿಯ ಶಕ್ತಿಯು ನೀನೆ
ಎನ್ನ ಮುಕ್ತಿಯ ಶಕ್ತಿಯು ನೀನೆ
ಈ ಭಕ್ತಿ-ಮುಕ್ತಿಗಳ ಶಕ್ತಿದೇವಿ ಮಹಾದೇವಿ ೮೬

ನನಗೂ ಅಕ್ಕ ನಿನಗಕ್ಕ
ಜಗದೆಲ್ಲ ಹಿರಿಯರಿಗೆ ಅಕ್ಕ
ಈ ತಮ್ಮ-ತಂಗಿಗಳ ದಾರಿತೋರಿದಕ್ಕಾ ೮೭

ಬೇಡಯ್ಯಾ ಬೇಡ ತಂದೆಗಳೇ
ಕೊಂಡಾಟ ಕುಂಡ ಬೇಡಯ್ಯಾ
ನಾ ಪಡೆದುದೆಲ್ಲವೂ ನಿಮ್ಮ ಸ್ಸಂಗದಿಂದ ೮೮

ಶರಣರ ಸಂಗದೊಳಗಿರಿಸಿ
ಕರುಣಿಸ ಗುರುಗಳೆಂದೆನಿಸಿ
ಲಿಂಗಾಂಗ ಸಮರಸ–ಜ್ಞಾನ ಕೊಟ್ಟರಯ್ಯ ೪೯

ಎಲ್ಲವನು ತಿಳಿದರೇನಯ್ಯ
ತನ್ನನ್ನೆ ತಿಳಿಯಬೇಕಯ್ಯ
ಚನ್ನಮಲ್ಲಿಕಾರ್ಜುನಂತಪ್ಪ ಪತಿಯು ಬೇಕಯ್ಯ ೫೦

ಬಾಯಾರಿ ಬಳಲುತಿಹೆನಯ್ಯ
ಬೀಸುವ ಗಾಳಿ ಉರಿಯಾಯ್ತು
ಬೆಳುದಿಂಗಳೆಲ್ಲ ಬಿಸಿಲಾಗಿ ಸುಡುತಲಿಹುದೋ ೫೧

ಹಣ್ಣೊಂದು ಕಣ್ಗೆ ಕಾಣುವುದು
ಹಣ್ಣಿನ ರುಚಿಯು ಅಡಗಿರುದು
ಹಣ್ಣಿನ ಮರೆಯ ರುಚಿಯಂತೆ ದೇವನಿರವು ೫೨

ಎಳ್ಳಿನಲಿ ಎಣ್ಣೆ ಇರುವುದು
ಹೊರಗಣ್ಗೆ ಎಣ್ಣೆ ಕಾಣಿಸದು
ಎಳ್ಳಿನ ಮರೆಯ ಎಣ್ಣೆಯ ತೆರದಿ ಇರುವಿ ೫೩

ಕಣ್ಣಿಗೆ ಕಾಂಬುದಿಲ್ಲಯ್ಯ
ಒಳಗಣ್ಣ ಮುಂದೆ ನಿಂತಿರುವಿ
ಮಾತಾಡಿಸಯ್ಯ ಮೃದುಮಧುರ ವಚನದಲ್ಲಿ ೫೪

ತನು ನಿಮ್ಮ ರೂಪ ಹೇ ದೇವ
ಮನ ನಿಮ್ಮ ರೂಪ ಮಹಾದೇವ
ಪ್ರಾಣವು ನಿಮ್ಮ ರೂಪಾಗಿ ಹೋಯಿತಯ್ಯ ೫೫

ಅರಿವೆಲ್ಲ ನಿಮ್ಮ ಸ್ವಯವಾಯ್ತು
ಇನ್ನಾರನರಿವೆ ಹೇಳಯ್ಯ
ನಿಮ್ಮನ್ನೆ ನೆನೆದು ನಿಮ್ಮಲ್ಲಿ ಬೆರೆತನಯ್ಯ ೯೬

ಆತ್ಮವು ಆತ್ಮ ಮಥನಿಸಿ
ಅನುಭಾವದಮೃತ ಹುಟ್ಟಿಸಿ
ನಾ ನಿಜವನ್ನೈದುವಾ ತಾಪ–ನೂರೆಯೊ ಪ್ರಭುವೇ ೯೭

ಅದೊ ನೋಡು ಗಿರಿಯ ಗೋಪುರವ
ಕಾಂತಿಯಲಿ ಕಣ್ಣು ಕುಕ್ಕುವ
ಬತ್ತರದ ಬಟ್ಟಬಯಲೊಂದು ಕಾಣುತಿಹುದಾ ೯೮

ಆ ಬಯಲಿನೆದೆಯ ಹಸುರಿನಲಿ
ಕದಳಿಯ ಬನದ ಸೊಬಗಿನಲಿ
ತೊಳತೊಳಗುತಿರುವ ತಿಳಿಜ್ಯೋತಿ ಹೊಳೆಯು-
ತಿಹುದಾ ೯೯

ನಡೆಯಲ್ಲಿಗೆ ನೀನೆ ತಾಯೇ
ನಿನ್ನವರ ಲಿಂಗದಲಿ ಬೆರೆಯೇ
ಅಲ್ಲಿಯೇ ಪರಮ ಪದವಿಯ ಹೊಂದು ತಾಯೇ ೧೦೦

ಇದು ಸತ್ಯ ಸತ್ಯ ಗುರುದೇವ
ಶ್ರೀಶೈಲವೆನ್ನ ಗುರಿ ದೇವ
ಹರಹರ ಬೆಳಕು ಕಾಂಬುವುದು ಹೊರಟೆ
ಪ್ರಭುದೇವಾ ೧೦೧

ನಮಿಸುವೆ ದಿವ್ಯ ಶರಣರಿಗೆ
ಕಲ್ಯಾಣವಿತ್ತ ನಗರಿಗೆ
ಅನುಭಾವವಿತ್ತ ಅನುಭವ ಮಂಟಪಕ್ಕೆ ೧೦೨

ಉಪಕಾರ ನೆಂತು ಸ್ಮರಿಸುವೆ
ಚನ್ನನ ಕೈಯ ಹಿಡಿದಿರುವೆ
ನಿಮ್ಮ ಮಂಟಪಗೊಂದು ಹೂ ತರುವೆ ಹುಲ್ಲನಲ್ಲೈ ೧೦೩

ಶ್ರೀಶೈಲ ದಾರಿ ಹಿಡಿದಾಳು
ಎತ್ತರದ ಶಿಖರವೇರುವಳು
ಆಧ್ಯಾತ್ಮ ಜೀವನದ ಕೊನೆಯ ಮುಟ್ಟುತಿಹಳೀಗ ೧೦೪

ಆಚಾರದ ಬೇರನೆ ಹಿಡಿದೆ
ಐಕ್ಯದ ತುದಿಯನೇರಿದೆ
ವೈರಾಗ್ಯ ಮೆಟ್ಟಿಲನ್ನೇರಿ ಗಿರಿಯ ಕಂಡೆ ೧೦೫

ವನವೆಲ್ಲ ಕಲ್ಪತರುವಿಲ್ಲಿ
ನೆಲವೆಲ್ಲ ಕ್ಷೇತ್ರವಲ್ಲಲ್ಲಿ
ಜುಳುಗುಡುವ ನೀರೆ ಅಮೃತವು ಕದಳಿಬನದಲ್ಲಿ ೧೦೬

ಕರವೆತ್ತಿ ನಿಂತಿರುವೆ ದೇವಾ
ಹೊರಗೆನ್ನ ನೂಕದಿರಿ ದೇವಾ
ಕರಪಿಡಿದು ಕರೆದುಕೊಳ್ಳಿರಿ ಕರುಣಾಸಾಗರ ೧೦೭

ಮೂಡಿದನು ಮೂಡಿದನು ಹರನು
ನಗೆಮೊಗವ ತೋರಿ ನಿಂತಿಹನು
ಹದಿನಾಲ್ಕು ಲೋಕ ಬೆಳಗುವ ದಿವ್ಯಜ್ಯೋತಿಯು ೧೦೮

ಕರಗಳನು ಮುಂದೆ ಚಾಚಿಹನು
ಮಗಳನ್ನು ತಂದೆಯಪ್ಪುವನು
ಭವಗೆಟ್ಟು ಬಂದೆಯಾ ಮಗಳೆ ಮಹಾದೇವೀ ೧೦೯

ಬೆಳಕೊಂದು ಬೆಳಕಿನೊಳಗಾಯ್ತು
ಮಿಂಚಿನಲಿ ಮಿಂಚು ಮರೆಯಾಯ್ತು
ಉಡುತಡಿಯ ಹೂವು ಚನ್ನನ ಪಾದ ಸೇರಿತು ॥೧೦

ಅಕ್ಕಾ ಕತ್ತಲಾಗಿಹುದು
ಕರುನಾಡ ಮುತ್ತಿ ಮುಸುಕಿಹುದು
ಬೆಳಕನ್ನು ನೀಡಿ ಜೀವನದ ಗುರಿಯು ತೋರೌ ॥೧೧

ಅಕ್ಕಾ ಜಾಣರಾಗಿಹೆವು
ವ್ಯವಹಾರ ಚತುರರಾಗಿಹೆವು
ಆಧ್ಯಾತ್ಮ ಜೀವನದ ಹುಚ್ಚು ಹಚ್ಚಿ ತಾಯೆ ॥೧೨

ಜೀವನಕೆ ಪ್ರೇಮ ಬೇಕಂತೆ
ಲೌಕಿಕದ ಪ್ರೇಮ ಎಷ್ಟಂತೆ ?
ಪಾರಮಾರ್ಥ ಸರಸ ಪ್ರೇಮಕ್ಕೆ ಮನವನೊಲಿಸೌ ॥೧೩

ಕವಿಯಿತ್ರಿ ಹುಚ್ಚಿ ಪ್ರೇಯಿಸಿ
ಧರ್ಮವನೆ ಕಾವ್ಯದೊಳು ಮಣಿಸಿ
ಜೀವನದ ತಿರುಳ ವಚನದಲಿ ಎರಕಹೊಯ್ದೆ ॥೧೪

ದೇವನ ಹಾಡಿ ಕವಿಯಾದೆ
ಚನ್ನನ ಬೇಡಿ ಹುಚ್ಚಾದೆ
ನಿಜಪತಿಯ ಕಾಡಿ ನಿಜವಾದ ಪ್ರೇಮಿಯಾದೆ ॥೧೫

ಏನೆತ್ತರ ಮಹಿಮೆಯೆ ತಾಯೆ
ಶ್ರೀಶೈಲದಮರಜ್ಯೋತಿಯೆ
ಭಾರತದಿ ಮೂಡು ಮತ್ತೊಮ್ಮೆ ನಾಡ ನಲ್ದಾಯೆ ॥೧೬

# ಹಿನ್ನುಡಿ- ಹಾರೈಕೆ

ಶರಣ ಸಾಹಿತ್ಯವು ಉಚ್ಚತಮ ಸಾಹಿತ್ಯ ! ಅದರ ಸೊಬಗಿಗೆ ಮನಸೋತವರೆಲ್ಲ "ಇದು ವಿಶ್ವಸಾಹಿತ್ಯ ! ವಿಶ್ವಬಾಂಧವ್ಯತತ್ವ-ಪ್ರಸಾರಕಸಾಹಿತ್ಯ ! " ಎಂದು ಅದನ್ನು ಗೌರವಿಸುತ್ತಿದ್ದಾರೆ. ಸಾಹಿತ್ಯಾಭಿಲಾಷಿಗಳೂ ಅಭ್ಯಾಸಿಗಳೂ ಈ ಸಾಹಿತ್ಯಾಮೃತದಿಂದಲೇ ತಮ್ಮ ತಮ್ಮ ಹಸಿವೆಯನ್ನು ತೃಪ್ತಿಗೊಳಿಸುತ್ತಿದ್ದಾರೆ. ಈ ಸಾಹಿತ್ಯವಲ್ಲಿಯು ಚಿರನೂತನವಾದುದು. ಸಾಧಕರ ಸಾಧ್ಯಕ್ಕೆ ಇದು ಮಹಾ ಸಾಧನವಾಗಿದೆ. ಅಲ್ಪಶ್ರಮದಿಂದ ಅತುಲ ಅಪಾರಲ್ಯ ಲಾಭವಾಗುವಂತಿದ್ದರೆ ಈ ಸಾಹಿತ್ಯದಿಂದಲೇ ಅದು ಸಾಧ್ಯ !

ಈ ಶರಣ ಸಾಹಿತ್ಯದ ಸೊಬಗು ಸವಿಗಳು ಪಂಡಿತರಂತೆ ಪಾಮರರಿಗೂ ಪ್ರಾಪ್ತವಾಗುವುದು ಅತ್ಯಗತ್ಯವಾಗಿದೆ. ಈ ಕೊರತೆಯನ್ನು ಶ್ರೀಮಾನ್ ಕರಡಿ ಅವರು ಕೊರಗಿಸಿದ್ದಾರೆ. ಅವರ ಈ ಕಾವ್ಯ ಮಹಾಕಾವ್ಯವಲ್ಲದಿರಬಹುದು. ಆದರೆ ಕಾವ್ಯದ ಮಹಿಮೆ ಇದರಲ್ಲಿ ಭಕ್ತಿರಸಗಂಗೆಯಾಗಿ ಹರಿಯುತ್ತಿದೆ ಸಾಧಕರಿಗೆ ಸಾನಂದಮಯ ಮಾಡುವಂತೆ ಸಾಂಸಾರಿಕರನ್ನು ತನ್ಮಯಗೊಳಿಸುತ್ತದೆ; ಭಾವಶುದ್ಧಿಗೊಳಿಸುತ್ತಿದೆ.

ಈ ಕಾವ್ಯ ಲಾವಣಿಯ ದಾಟಿಯಲ್ಲಿದೆ. ಆದ್ದರಿಂದ ಅದು ಸಾಮಾನ್ಯ ಪಾಠಕರಿಗೆ ಸಹಜವಾಗಿ ಅವಗತವಾಗುತ್ತದೆ.

ಕತ್ತಲೆಯಲ್ಲಿ ಕಾಲ ಕಳೆದ ಕೌಶಿಕ ಬೆಳಕಿನಲ್ಲಿ ಬಳೆದ ಬಾಲವಿರಾಗಿಣಿಯ ತೇಜೋರಾಶಿಯೆದುರು ಎಂತು ಕಣ್ದೆರೆಯಬಲ್ಲ ? ಸ್ತ್ರೀಯಾದರೇನು ? ಪುರುಷನಾದರೇನು ? ಆಧ್ಯಾತ್ಮಿಕ

ಬಲವಂತರಿಂದಾದರೂ ಹೀನ ಸಾಂಸಾರಿಕರಿಗೆ ಸೋಲುವರೇ ? ಈ ತತ್ತ್ವವೇ ಈ ಕಾವ್ಯದ ಕೆಚ್ಚು ! ಪ್ರಾಣ !!

ಅಕ್ಕ ಮಹಾದೇವಿಯ ಆಧ್ಯಾತ್ಮಿಕ ತೇಜೋರಾಶಿಗೆ ಈ ಕಾವ್ಯವು—ಲಾವಣಿಯು—ಒಂದು ಮಾಪನವಾಗಿರದಿದ್ದರೂ, ಅದರ ವಿಶಾಲ ನಿದರ್ಶನಕ್ಕೆ ಭಕ್ತಿನೇತ್ರವಾಗಿದೆ ಮಾತ್ರ. ಇದರಲ್ಲಿಯೆ ಈ ಕಾವ್ಯಕ್ಕೆ ಮಹಿಮೆ ಇದೆ.

ಅಕ್ಕನ ವಚನ ಕುಮಾರಿಯು ಪದಲಾಲಿತ್ಯ, ಭಾವ ಬಾಂಧುರ್ಯ, ಅರ್ಥಗಾಂಭೀರ್ಯ, ನಾದಮಾಧುರ್ಯಗಳು ಈ ಲಾವಣಿಯಲ್ಲಿ ಸಂಪೂರ್ಣವಾಗಿ ರೂಪುಗೊಂಡಿವೆ. ಹಾಡುತ್ತ ಹೋದಂತೆ ಆ ಬಾಲವಿರಾಗಿಣಿಯ ಮಹಿಮಾ ಪ್ರಭಾವದಿಂದ ಆ-ಬಾಲ ವೃದ್ಧರೂ ಪಂಡಿತ-ಪಾಮರರೂ ಪಾರಮಾರ್ಥ ಧ್ಯಾನದಲ್ಲಿ ತಲ್ಲೀನರಾಗುತ್ತಾರೆ. ಕವಿ ಶ್ರೀಮಾನ್ ಕರಡಿ ಅವರ ಹೃದಯಾಂತರಾಳದಲ್ಲಿಯ ಅಕ್ಕನ ಮಹಿಮಾ ಮೂರ್ತಿಯ ಪ್ರೇರಣೆಯೇ ಇದಕ್ಕೆ ಕಾರಣ.

ಆ ಆಂತರಿಕ ಪ್ರೇರಣಾಶಕ್ತಿ ಈ ಕಾವ್ಯಸೃಷ್ಟಿಗೆ ಬೆಂಬಲವಾಗಿರುವದರಿಂದಲೇ ಇದಕ್ಕೆ ಈ ಗೌರವ ಪ್ರಾಪ್ತವಾಗಿದೆ.

ಶ್ರೀಮಾನ್ ಕರಡಿ ಅವರಿಂದ ನಾವು ಬಯಸುವ ಅನೇಕ ಕೃತಿಗಳಲ್ಲಿ ಇದು ಪ್ರಥಮವಾಗಿದೆ. ಅಂತೆಯೇ ಇದು ಪ್ರಥಮ ಸ್ಥಾನ ಪಡೆಯದೆ, ಅದರ ಉಚ್ಚತಮ ಕಲಾ ಸೌಂದರ್ಯವೇ ಅದಕ್ಕೆ ಪ್ರಥಮ ಸ್ಥಾನವನ್ನಿತ್ತಿದೆ. ಇಂಥ ಅನೇಕ ಕಲಾಕೃತಿಗಳು ಶ್ರೀಮಾನ್ ಕರಡಿ ಅವರಿಂದ ರಚಿತವಾಗಿ ಕನ್ನಡಿಗರ

ಕುಲದೇವತೆಗೆ ಅವು ಪ್ರೇಮದ ದೇಗುಲಗಳಾಗಲೆಂದು ಹಾರೈಸುವೆ.

ಈ ಕಾವ್ಯ ಪ್ರಸಿದ್ಧಿಯ ಸಮಾರಂಭ ಸೇವಾಲಾಭ ನನಗೆ ದೊರೆತುದಕ್ಕೆ ಹಾಗೂ ಈ ಹಿನ್ನುಡಿಯ ಶುಭ ಪ್ರಸಂಗವನ್ನು ಒದಗಿಸಿ ಕೊಟ್ಟುದಕ್ಕೆ ಕಲಾವಂತ ಕರಡಿ ಅವರಿಗೆ ನಾನು ಚಿರಋಣಿ.

ತಿಳಕವಾಡಿ
೧೨-೨-೧೯೪೯

ಶರಣರ ಅಡಿಯಾಳು
ಕೇದನೂರ ಮಲ್ಲೇಶಿ

ಲಲಿತ
ಮುದ್ರಣಾಲಯ
ಧಾರವಾಡ